ತನ್ನೊಳಗೇ ತವಕಿಸುತ್ತ ಬಾಗಿಲು ತೆರೆಯುವುದನ್ನೆ ಹಗಲಿರುಳೆನ್ನದೆ ಕಾಯಲಾರಂಭಿಸಿದ. ಕೊನೆಗೂ ಹಗಲಿರುಳುಗಳುರುಳಿ ಉರುಳಿ ಬಾಗಿಲು ಕರ್... ಅಂತು. ಆದರೆ, ಬಂದಿದ್ದು ದೊರೆಯಲ್ಲ. ಮಾಲಿಗಳಿಬ್ಬರು ಒಬ್ಬರ ಹಿಂದೊಬ್ಬರು ಒಳ ಬಂದರು. ಇಬ್ಬರೂ ಮುಖ ಗವಸು ಹಾಕಿಕೊಂಡಿದ್ದರು. ಒಬ್ಬ ಗಡಿಬಿಡಿಯಿಂದ ಮಾತಾಡುವ ಪೆಟ್ಟಿಗೆಯತ್ತ ನಡೆದ. ಮತ್ತೊಬ್ಬ ಗವಸಿನೊಳಗಿಂದಲೇ ಗೊಣಗುತ್ತ ಪೊರಕೆ ತೆಗೆದುಕೊಂಡು ದೂಳು ಹೊಡೆಯಲಾರಂಭಿಸಿದ. ಗೋಡೆ ಮೇಲಿನ ಸ್ವಿಚ್ ಅದುಮಿ ಪೆಟ್ಟಿಗೆ ಸ್ವರ ಹೊರಡಿಸುತ್ತಿದ್ದಂತೆ ಆತನೂ ಇನ್ನೊಂದು ಬದಿಯಿಂದ ಪೊರಕೆ ಹಿಡಿದು ಝಾಡಿಸಲಾರಂಭಿಸಿದ. ಮಾತಿನ ಪೆಟ್ಟಿಗೆಯಲ್ಲಿ ಜಾಹಿರಾತು ಮುಗಿದು ದೃಶ್ಯ ಬರಲಾರಂಭಿಸಿತು. ನಿರೂಪಕನ ಪ್ರವೇಶವಾಗಿತ್ತು. ಆತ ನಾಡಿನ ದೊರೆ ತನ್ನ ಜನರ ಜೀವ ಉಳಿಸಲು ನಾಡಿನ ಬಾಗಿಲು ಮುಚ್ಚಿದ ಕಥೆ ಹೇಳುತ್ತಿದ್ದ. ಗಾಲಿಗಳು ಉರುಳದೆ ಸ್ತಬ್ಧಗೊಂಡ ರಸ್ತೆಗಳ ಮೇಲೆ ಸಾಮಾನುಗಳನ್ನು ಮಕ್ಕಳನ್ನು ಹೊತ್ತು ಉದ್ದಾನುದ್ದ ನಡೆಯುತ್ತಿರುವ ಜನ, ಮುಚ್ಚಿದ ಅಂಗಡಿ ಬಾಗಿಲುಗಳು, ಅನ್ಯ ಗ್ರಹದ ಅಣು ಜೀವಿಯ ದಾಳಿಯಿಂದ ಜನತೆಯನ್ನು ರಕ್ಷಿಸಲೆಂದೇ ರಸ್ತೆಗಿಳಿದ ಮಹಾಜನತೆಯ ಮೇಲೆ ಲಾಟಿ ಬೀಸುತ್ತಿರುವ ಕಾವಲು ಭಟರ ಕೂಟ.. ಇದ್ದಕ್ಕಿದ್ದಂತೆ ನಿರೂಪಕನ ಧ್ವನಿ ಮತ್ತಷ್ಟು ಬದಲಾಯಿತು. ಪೆಟ್ಟಿಗೆಯೊಳಗೆ ಕಾಣಿಸಿಕೊಂಡ ದೃಶ್ಯದಿಂದ ರಾಜಗುರು ತತ್ತರಿಸಲಾರಂಭಿಸಿದ. ಸುದೀರ್ಘ ನಡಿಗೆಯಿಂದ ದಣಿದು ಸ್ತಬ್ಧಗೊಂಡಿದ್ದ ರೈಲು ಹಳಿಯ ಮೇಲೆ ಕಾಲು ಚಾಚಿ ನಿದ್ರಿಸಿದ ಜನ ಸಮೂಹವನ್ನು ನೊಣೆದು ಚರ್ರನೆ ರಕ್ತ ಹಾರಿಸುತ್ತ ಗಡಗಡನೆ ಸರಿದು ಹೋಗಿತ್ತು ರೈಲುಗಾಡಿ. ಜೋರಾದ ಗಾಳಿಗೆ ಪೀಠ ಜಾರಿ ಆಗಲೇ ಶಿಥಿಲಾವಸ್ಥೆಗೆ ತಲುಪಿದ ಆ ಬೃಹತ್ ಪುಸ್ತಕ ಟಪ್ಪನೆ ಕೆಳಗೆ ಬಿತ್ತು. ಕೆಲಸಗಾರರಿಬ್ಬರು ಗಾಬರಿಯಿಂದ ಓಡಿ ಬಂದು ಪುಟಗಳೆಲ್ಲ ಚಲ್ಲಾಪಿಲ್ಲಿಯಾದ ಪುಸ್ತಕವನ್ನು ನೋಡುತ್ತಾ ನಿಂತರು. 'ದೊರೆ ಬಂದಾಗಲೆಲ್ಲ ಈ ಪುಸ್ತಕ ನನ್ನ ರಾಜಗುರು, ಆತ್ಮಸಖ ಎಂದು ಕೈ ಮುಗಿಯುತ್ತಾನೆ. ಈಗೇನು ಮಾಡೋಣ.' 'ಅಯ್ಯೋ..ಇದು ತೆಂಕಣ ದೇಶದ ಎಲ್ಲಾ ಭಾಷೆಗಳಿಗೆ ಅನುವಾದ ಆದ ಪುಸ್ತಕವಂತೆ. ಯಾರೋ ಮಹಾತ್ಮ ಬರೆದಿರುವುದಂತೆ. ನಮ್ಮ ದೊರೆಗಳಿಗೆ ಯಾರೊ ದೊಡ್ಡ ಸನ್ಯಾಸಿ ಕೊಟ್ಟಿದ್ದಂತೆ. ಈ ದೇಶದ ಮಹಾತ್ಮರಲ್ಲಿ ಒಬ್ಬನಾದ ಅವನ ಮೇಲೆ ಭಾರೀ ಗೌರವ ನಮ್ಮ ದೊರೆಗಳಿಗೆ' ಮತ್ತೊಬ್ಬ ಮಾಲಿ ಗಾಬರಿಯಿಂದಲೇ ಹೇಳಿದ. ಇಬ್ಬರೂ ಮುಖ ಮುಖ ನೋಡಿಕೊಂಡರು. ಒಬ್ಬನ ಮುಖದಲ್ಲಿ ಏನೋ ಹೊಳೆದಂತೆ ಮುಗುಳು ನಗು.

'ಹೇಗೂ ದೊರೆಗಳು ಸದ್ಯ ಇತ್ತ ಬರಲಾರರು. ನಮ್ಮ ಈ ಮ್ಯೂಸಿಯಮ್ಮಲ್ಲಿ ಬುದ್ಧ, ಗಾಂಧಿ, ಅಂಬೇಡ್ಕರ್ ಮರ್ತಿಗಳೆಲ್ಲ ಇದೆಯಲ್ಲ. ಮತ್ತೆ ಇನ್ನೂ ಯಾರೋ ದೊಡ್ಡವರದೆಲ್ಲ ಮರ್ತಿ ತಯಾರಾಗ್ತಾ ಇದೆಯಲ್ಲ. ಅವುಗಳ ಪಕ್ಕ ಈ ಪುಟಗಳಿಗೆಲ್ಲ ದೊಡ್ಡದಾಗಿ ಬೇರೆ ಬೇರೆ ಬೆಳ್ಳಿ ಫ್ರೇಮ್ ಹಾಕಿಸಿ ಇಟ್ಟರೆ ದೊರೆಗಳಿಗೆ ಖುಷಿಯಾಗಬಹುದು. ವಿದೇಶದಿಂದ ದೊಡ್ಡ ದೊಡ್ಡ ನೆಂಟರು ಬಂದಾಗ ಅವರನ್ನು ದೊರೆಗಳೇ ಕರೆತರುತ್ತಾರಲ್ಲ. ಆಗ ನನ್ನ ರಾಜಗುರು ಅಂತ ಈ ಅವಕುಂಠನ ತೆಗೆದು ತೋರಿಸ್ತಿದ್ರಲ್ಲ. ಮುಂದಿನ ಸಾರಿ ಬರುವಾಗ ಕಟ್ಟು ಹಾಕಿದ ಚಿತ್ರವನ್ನೇ ಹೆಮ್ಮೆಯಿಂದ ತೋರಿಸಬಹುದು.'

'ನೋಡು. ಆ ಮುಖಪುಟವನ್ನು ಮಾತ್ರ ದಪ್ಪ ಚೌಕಟ್ಟಿನಲ್ಲಿ ಕೂರಿಸಬೇಕು.' ಇಬ್ಬರೂ ಅದೇ ಸರಿ ಎಂದು ಮಾತಾಡಿಕೊಳ್ಳುತ್ತ ಒಂದೊಂದೇ ಪುಟಗಳನ್ನು ಹೆಕ್ಕಲಾರಂಭಿಸಿದರು..

***

'ಹೇಯ್... ಬೇಡಾ... ಬೇಡಾ... ಸ್ಟ್ಯಾಚ್ಯು ಬೇಡ... ರಾಜಗುರುವನ್ನು ಸ್ಟ್ಯಾಚ್ಯು ಮಾಡ್ಬೇಡಿ... ಬೆಳ್ಳಿ ಬಂಗಾರದ ಪಟ್ಟಿ ಬೇಡಾ...' ಶೂಟಿಂಗ್ ಸೆಟ್ಟಲ್ಲಿದ್ದವರೆಲ್ಲ ಗಾಬರಿಯಿಂದ ತಂತಮ್ಮ ಕೆಲಸಗಳನ್ನು ಅಲ್ಲಲ್ಲೆ ನಿಲ್ಲಿಸಿ ಧ್ವನಿ ಬಂದತ್ತ ನೋಡಿದವರೇ ಅತ್ತ ಓಡಲಾರಂಭಿಸಿದರು. ಶೀನಿ ಅಸಿಸ್ಟೆಂಟ್ ಜೊತೆ ಗಹನವಾದ ಚರ್ಚೆಯಲ್ಲಿದ್ದ. ಇದ್ದಕ್ಕಿದ್ದಂತೆ ಕೇಳಿ ಬಂದ ಗುರುಮೂರ್ತಿಯ ಸ್ವರಕ್ಕೆ ಅವನ ಶರೀರವಿಡೀ ಕಂಪಿಸಿತು. ಬೇಡ... ಸ್ಟ್ಯಾಚ್ಯು ಬೇಡ ಅನ್ನುತ್ತ ಗುರುಮೂರ್ತಿ ಜೋರಾಗಿ ಕಿರುಚುತ್ತ ಸೆಟ್ಟಿಗಾಗಿ ಹಾಕಿದ್ದ ಕೆರೆಯ ಕಡೆ ಓಡುತ್ತಿದ್ದ...

●